ಸಿ.ಸಿ .ನಂ. 137/2023 ಪಿಡಬ್ಲೂಃ 1

ದಿನಾಂಕಃ 11-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಮ್ ಟಿ ಹೆಚ್ ವಕೀಲರಿಂದಃ**

5. ಆರೋಪಿಯ ಜೊತೆ ಜಮೀನು ಖರೀದಿಗೆ ಎಗ್ರಿಮಂಟ್ ಬಗ್ಗೆ ಗೊತ್ತಿದೆ . ಕರಾರು ಪತ್ರ ಮಾಡಿಕೊಂಡಿದ್ದೆವು. 2013 ರಲ್ಲಿ ಕರಾರು ಪತ್ರ ಮಾಡಿಕೊಂಡಿದ್ದೆವು . ಎಷ್ಟು ಎಗ್ರಿಮೆಂಟ್ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಸುಮ್ಮನೇ ನಿಂತಿರುತ್ತಾರೆ . ನಾನು ಮಹಾಬಳೇಶ್ವರ ಕರಾರು ಮಾಡಿಕೊಂಡಿದ್ದೆವು . ನಾನು ಸಹಿ ಹಾಕಿರುತ್ತೇನೆ. ನಾನು ಹಾಗೂ ಆರೋಪಿ ಸಹಿ ಹಾಕಿದ್ದೆವು. ಸಾಕ್ಷಿಯಾಗಿ ಯಾರು ಸಹಿ ಹಾಕಿಲ್ಲ. ಕರಾರು ಪತ್ರವನ್ನು ಅವರೇ ಮಾಡಿಸಿಕೊಟ್ಟಿದ್ದರು . ನಾನು ಓದಿಲ್ಲ. ಸರ್ವೆ ನಂಬರ ಹೇಳಲು ಗೊತ್ತಿಲ್ಲ. ವ್ಯವಹಾರ ನಾನೇ ಮಾಡಿರುತ್ತೇನೆ. ದಾನೇಶ್ವರ ನನ್ನ ಹೆಂಡತಿಯ ಅಣ್ಣ . ವಕೀಲರಿಗೆ ಮಾಹಿತಿ ಕೊಡಲು ನಾನು ಹೋಗಿದ್ದೆ . ಈ ವ್ಯವಹಾರದ ಜೊತೆಗೆ ದಾನೇಶ್ವರ ಬಂದಿರಲಿಲ್ಲ. ಕರಾರಿನಲ್ಲಿ ಬರೆದ ಸರ್ವೆ ನಂಬರ ಬಗ್ಗೆ ಮಾಹಿತಿ ಇಲ್ಲ. ಜಾಗವನ್ನು ನಾನು ನೋಡಿದ್ದೇನೆ. ಆ ಜಾಗದ ಸರ್ವೆ ನಂಬರನ ರೆಕಾರ್ಡನ್ನು ನಾನು ನೋಡಿದ ಬಗ್ಗೆ ಮಾಹಿತಿ ಇಲ್ಲ . ಕರಾರಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಹೌದು. ನಾನು ಹಾಗೂ ಆರೋಪಿ ಯಾವುದೇ ಕರಾರು ಮಾಡಿಕೊಂಡಿಲ್ಲ ಎಂದರೆ ಸರಿ . ಮನೆಯವರ ಪಾಲುಬಂದಿತ್ತು. ಅದರಿಂದ ಹಣವನ್ನು ಕೊಟ್ಟಿರುತ್ತೇನೆ. ಹೆಗಡೆ ಕ್ರಾಸ್ ನಲ್ಲಿ ಮನೆ ಇರುತ್ತದೆ. ಅದನ್ನು ಪಾಲು ಮಾಡಿಕೊಂಡಿರುತ್ತೇವೆ . ಅದರ ಹಣ ಎರಡುವರೆ ಲಕ್ಷ ಬಂದಿತ್ತು . ನನ್ನ ಸ್ವಂತ ತಮ್ಮ ಹನುಮಂತ ಆಚಾರಿ ಹಣ ಕೊಟ್ಟಿದ್ದರು. ನನ್ನ ತಮ್ಮ ಸಾಲ ಮಾಡಿ ನನಗೆ ಹಣವನ್ನು ಕೊಟ್ಟಿದ್ದರು . ಹನುವಂತ ಆಚಾರಿ ಸಾಲ ಮಾಡುವಾಗ ನಾನು ಸಹಿ ಹಾಕಿದ್ದೆ . ಯಾವ ಬ್ಯಾಂಕಿನಲ್ಲಿ ಸಾಲ ಮಾಡಿದ್ದಾರೆ ನೆನಪಿಲ್ಲ. ನಾನು ಹಾಗೂ ರಮಾಕಾಂತ ಆಚಾರಿ ಸಹಿ ಮಾಡಿದ್ದೆವು . ನನಗೆ ಮಾತ್ರ ಹಣ ಕೊಟ್ಟಿರುತ್ತಾರೆ. ರಮಾಕಾಂತ ಆಚಾರಿಗೆ ಹಣ ಕೊಟ್ಟಿಲ್ಲ . ನನ್ನ ತಮ್ಮ ಹಣ ಕೊಟ್ಟಿರುವುದು ನನ್ನ ಫಿರ್ಯಾದಿನಲ್ಲಿ ಬರೆಸಿಲ್ಲ ಹಾಗೂ ನಾನು ಅದನ್ನು ನಮ್ಮ ವಕೀಲರಿಗೆ ಹೇಳಿಲ್ಲ . ಆ ಸಮಯದಲ್ಲಿ ದಾನೇಶ್ವರ ಇರಲಿಲ್ಲ. ವ್ಯವಹಾರಕ್ಕೆ ಅವರು ಬರಲಿಲ್ಲ. ಕರಾರು ಪತ್ರ ನನ್ನ ಹತ್ತಿರ ಇತ್ತು . ಅದರ ಮೇಲೆ ಬೇರೆ ಯಾವುದೇ ದಾವೆಯನ್ನು

ಹಾಕಿಲ್ಲ. ಕರಾರಿನಲ್ಲಿ ಚೆಕ್ ಮೂಲಕ ಹಣ ಕೊಟ್ಟ ಬಗ್ಗೆ ಬರೆದಿಲ್ಲ. ನನ್ನ ತಮ್ಮ ನನಗೆ ಹಣವನ್ನು ನಗದಾಗಿ ಕೊಟ್ಟಿದ್ದರು. ನನ್ನ ತಮ್ಮ ಸಾಲ ಮಾಡಿದ ಬ್ಯಾಂಕಿನ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ತಮ್ಮ ಮರಣ ಹೊಂದಿ ನಾಲ್ಕು ವರ್ಷಗಳಾಗಿರುತ್ತವೆ. ವಕೀಲರಿಗೆ ಈ ರೀತಿ ಬರೆಯಿರಿ ಎಂದು ನಾನೇ ಹೇಳಿದೆ. ಸಾಲ ಮಾಡಿ ನನಗೆ ಹಣ ಕೊಟ್ಟಿದ್ದರು ಎಂದು ಇದೇ ಪ್ರಥಮಬಾರಿ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ . ಆರೋಪಿಗೆ ನೋಟಿಸನ್ನು ಕೊಟ್ಟಿದೆನು . ಒಂದು ನೋಟಿಸನ್ನು ಕೊಟ್ಟಿರುತ್ತೇನೆ. 2013 ರಲ್ಲಿ ನೋಟಿಸನ್ನು ಕೊಟ್ಟಿರುತ್ತೇನೆ. ನೋಟಿಸು ಅವರಿಗೆ ಜಾರಿಯಾಗಿರುತ್ತದೆ. ನೋಟಿಸು ಜಾರಿಯಾಗಿ ಬಂದ ಪರತ್ ಪಾವತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. 2020 ರಲ್ಲಿ ಚೆಕ್ ನ್ನು ಕೊಟ್ಟರು . ಎರಡುವರೆ ಲಕ್ಷಕ್ಕೆ ಒಂದೇ ಚೆಕ್ ನ್ನು ಕೊಟ್ಟರು . ನಾನು ಅವರ ಮನೆ ಹತ್ತಿರ ಹೋದಾಗ ಚೆಕ್ ನ್ನು ಕೊಟ್ಟರು. ನಾನು ಒಬ್ಬನೇ ಅವರ ಮನೆ ಹತ್ತಿರ ಹೋಗಿರುತ್ತೇನೆ. ನಾನು ಚೆಕ್ ನ್ನು ಯುನಿಯನ್ ಬ್ಯಾಂಕಿಗೆ ಹಾಕಿರುತ್ತೇನೆ. ಚೆಕ್ ಬೋನ್ಸ ಆದ ಬಗ್ಗೆ ಆರೋಪಿಗೆ ತಿಳಿಸಿರುತ್ತೇನೆ. ನಾನು ನಂತರ ವಕೀಲರ ಬಳಿ ಹೋಗಿರುತ್ತೇನೆ. ನಂತರ ನನ್ನ ಬಾವ ಕೂಡ ವಕೀಲರಲ್ಲಿ ಹೋಗಿರುತ್ತಾರೆ. ನಂತರ ವಕೀಲರು ನೋಟಿಸನ್ನು ಕೊಟ್ಟಿರುತ್ತಾರೆ. ನಾನು ನೋಟಿಸನ್ನು ಓದಿಲ್ಲ. ಕೇಳಿ ತಿಳಿದುಕೊಂಡಿಲ್ಲ. ಆರೋಪಿ ಉತ್ತರ ಕೊಟ್ಟಿಲ್ಲ . ಕರಾರು ಪತ್ರದ ಮೇಲೆ ನೋಟಿಸನ್ನು ಕೊಟ್ಟಿಲ್ಲ. ಅದು ಎಷ್ಟು ಅವಧಿಯ ಎಗ್ರಿಮೆಂಟ್ ಗೊತ್ತಿಲ್ಲ. ಆ ವಿಚಾರದ ಬಗ್ಗೆ ಆರೋಪಿಯ ಹತ್ತಿರ ಮಾತನಾಡಲಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.